ಬೆಂಗಳೂರು ಜಿಲ್ಲಾ ಪರಿಷತ್ತಿನಿಂದ ಅಡ್‌ಹಾಕ್ ಆಧಾರದ ಮೇಲೆ ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರು.

3019 - ಶ್ರೀ ಕೆ.ಲಕ್ಕಪ್ಪ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) *ಬೆಂಗಳೂರು ಜಿಲ್ಲಾಪರಿಷತ್ತಿನಿಂದ ಅಡ್‌ಹಾಕ್ ಆಧಾರದ ಮೇಲೆ ನೇಮಕಗೊಂಡಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆಎಷ್ಟು?*

ಬಿ) *ಸರ್ವೋಚ್ಚ ನ್ಯಾಯಾಲಯವು ಈ ಅಡ್ ಹಾಕ್ ಶಿಕ್ಷಕರುಗಳಿಗೆ ಆಯ್ಕೆ ಸಮಿತಿ ಮುಂದೆ ಹಾಜರಾಗಲು ಅವಕಾಶ ನೀಡುವಂತೆ ಹಾಗೂ ಅರ್ಹತೆ ಇರುವವರನ್ನು ವಿಲೀನಗೊಳಿಸಿಕೊಳ್ಳುವಂತೆ ನಿರ್ದೇಶನ ನೀಡಿದೆಯೇ?*

ಸಿ) *ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಎ) ಅಡ್ ಹಾಕ್ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾದ ಪ್ರಾಥಮಿಕ ಶಾಲಾಶಿಕ್ಷಕರ ಒಟ್ಟು ಸಂಖ್ಯೆ 1598. ಇವರಲ್ಲಿ ದಿನಾಂಕ 30-6-91ಕ್ಕೆ 1438 ಶಿಕ್ಷಕರು ಕೆಲಸ ನಿರ್ವಹಿಸುತ್ತಿರುತ್ತಾರೆ.

ಬಿ) ಹೌದು ಸರ್ವೋಚ್ಚ ನ್ಯಾಯಾಲಯವು ದಿನಾಂಕ 19-7-91ರ ಆದೇಶದಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವಾಗ, ಅಡ್ ಹಾಕ್ ಆಧಾರದಲ್ಲಿನ ಶಿಕ್ಷಕರು ಸಲ್ಲಿಸಿರುವ ಸೇವಾನುಭವದ ಆಧಾರದಲ್ಲಿ ಆಯ್ಕೆ ಮಾಡಲು ನಿರ್ದೇಶನ ನೀಡಿರುತ್ತದೆ.

ಸಿ) ಬೆಂಗಳೂರು (ಗ್ರಾ) ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಂದ ಪ್ರಸ್ತಾವನೆ ಬಂದ ಮೇಲೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸೂಕ್ತ ಸೂಚನೆಗಳನ್ನು ನೀಡಲಾಗುವುದು.

ಟ್ರೈಸಂ ಯೋಜನೆ

3075 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಿರುದ್ಯೋಗಿ ಯುವಕರನ್ನು ಟ್ರೈಸಂ ಯೋಜನೆಯಡಿ ತರಬೇತಿಗೊಳಿಸುತ್ತಿರುವ ಉದ್ದೇಶ;*

ಆ) *ಟ್ರೈಸಂ ಯೋಜನೆಯಡಿ ತರಬೇತಿಗೊಳಿಸಲಾದ ಚಿಂತಾಮಣಿ ತಾಲ್ಲೂಕಿನ ಗ್ರಾಮೀಣ ನಿರುದ್ಯೋಗಿ ಯುವಕರು ಸ್ವಉದ್ಯೋಗವನ್ನು ಪ್ರಾರಂಭಿಸಲು ನೆರವುದೊರಕದೆ ತೊಂದರೆಗೊಳಗಾಗಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ತಿಳಿದು ಬಂದಿದೆಯೆ;*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು):

ಅ) ನಿರುದ್ಯೋಗಿ ಗ್ರಾಮೀಣ ಯುವಕರಿಗೆ ತಾಂತ್ರಿಕ ಪರಿಣತಿ ತರಬೇತಿ ನೀಡುವುದರಿಂದ ಸ್ವಯಂ ಉದ್ಯೋಗ ರಚಿಸಿಕೊಳ್ಳಲು ಅನುಕೂಲ ಮಾಡಿಕೊಡುವುದೇ ಟ್ರೈಸಂ ಯೋಜನೆಯ ಉದ್ದೇಶ.

ಆ) ಟ್ರೈಸಂ ಯೋಜನೆಯಡಿ ತರಬೇತಿಹೊಂದಿರರುವ ಚಿಂತಾಮಣಿ ತಾಲ್ಲೂಕಿನ ಗ್ರಾಮೀಣ ನಿರುದ್ಯೋಗಿ ಯುವಕರು ನೆರವು ದೊರಕದೆ ತೊಂದರೆಗೊಳಗಾಗಿರುವಂತಹ

ನಿರ್ದಿಷ್ಟ ಸಂಗತಿಗಳಾವುವೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಸಭೆ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹಾಗೂ ೧ ಮವರೆಗೆ ಈ ಯೋಜನೆಯಡಿ ತರಬೇತಿ ಹೊಂದಿ ಬ್ಯಾಂಕ್ ನೆರವಿಗಾಗಿ ನಿರೀಕ್ಷಿಸಿ ನಿರುದ್ಯೋಗಿಗಳಾಗಿಯೇ ಉಳಿದಿರುವ ಫಲಾನುಭವಿಗಳ ವಿವರಗಳನ್ನು ಕಳುಹಿಸಿಕೊಡುವಂತೆ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಯಡಿ ಧನಸಹಾಯ ಹಾಗೂ ಡಿ.ಆರ್.ಐ. ಅನ್ವಯ ಸಾಲ ಹಾಗೂ ಇತರ ಯೋಜನೆ ಯಡಿಯಲ್ಲಿ ದೊರೆಯಬಹುದಾದ ಅನುಕೂಲಗಳನ್ನು ದೊರಕಿಸಿ ಅಭ್ಯರ್ಥಿಗಳು ಸ್ವಯಂ ಉದ್ಯೋಗದಲ್ಲಿ ನಿರತರಾಗಲು ಅನುವು ಮಾಡಿಕೊಡುವಂತೆ ಸರ್ಕಾರದ ಸೂಚನೆಗಳನ್ನು ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು, ಕೋಲಾರ ಜಿಲ್ಲೆ ಇವರಿಗೆ ನೀಡಲಾಗಿದೆ.

ಹಳ್ಳಿಗಳಲ್ಲಿ ಸಮುದಾಯ ಕೇಂದ್ರಗಳ ಸ್ಥಾಪನೆ

3039 - ಶ್ರೀ ಬಿ. ಎ. ಚೌಡಾರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳ್ಳಿಗಳಲ್ಲಿ ಸಮುದಾಯ ಕೇಂದ್ರ ಕಟ್ಟಡಗಳಿಲ್ಲದಿದ್ದಲ್ಲಿ ಅದನ್ನು ರಚಿಸುವ ಯಾವುದೇ ಯೋಜನೆ ಇರುವುದೇ;

ಆ) ರಾಜ್ಯದ ಬಹುತೇಕ ಸಮುದಾಯ ಕೇಂದ್ರ ಕಟ್ಟಡಗಳು ಮುಖ್ಯವಾಗಿ ಚಿಂತಾಮಣಿ ತಾಲ್ಲೂಕಿನಲ್ಲಿರುವ ಕಟ್ಟಡಗಳು ಸರಿಯಾದ ನಿರ್ವಹಣೆ ಇಲ್ಲದೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಅಂಥಾ ಕೆಲಸಗಳನ್ನು ಜವಾಹರ್ ರೋಜ್ ಗಾರ್ ಯೋಜನೆಯಲ್ಲಿ ತೆಗೆದುಕೊಳ್ಳಲು ಅವಕಾಶವಿದೆ.

ಆ) ಹೌದು. ನಿರ್ವಹಣೆ ಕೂಡಾ ಮಂಡಲ ಪಂಚಾಯತಿಯವರ ಜವಾಬ್ದಾರಿ ಮತ್ತು ಅಂಥಾ ಸ್ಥಿರಾಸ್ತಿಗಳನ್ನು ನಿರ್ವಹಣೆ ಮಾಡಲು ಜವಾಹರ್ ರೋಜ್ ಗಾರ್ ಯೋಜನೆಯಲ್ಲಿ ಹಣ ಒದಗಿಸಲು ಅವಕಾಶವಿದೆ.

ಕಿರು ನೀರು ಸರಬರಾಜು ಮತ್ತು ನಲ್ಲಿನೀರು ಸರಬರಾಜು ಯೋಜನೆ

3244 - ಶ್ರೀಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಲವಾರು ಹಳ್ಳಿಗಳಲ್ಲಿ ಜಿಲ್ಲಾ ಪರಿಷತ್‌ಗಳು ಮಂಡಲ ಪಂಚಾಯತಿಗಳು ಕಿರು ನೀರು ಸರಬರಾಜು ಮತ್ತು ನಲ್ಲಿ ನೀರು ಸರಬರಾಜು ಕಾರ್ಯ ಸಂಬಂಧ ಬೇಕಾಗಿರುವ 'ವಾಟರ್ ಮನ್'ಗಳನ್ನು ನೇಮಿಸಿಕೊಳ್ಳದಿರುವುದು ಸಹಕಾರದ ಗಮನನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಸರ್ಕಾರವು ಸದರಿ ಕಾರ್ಯ ನಿಮಿತ್ತ ಸಮರ್ಪಕ ನಿರ್ವಹಣೆಗೆ ಜಿಲ್ಲಾ ಪರಿಷತ್ತ್ ಮಂಡಲ ಪಂಚಾಯತ್ ಮುಖಾಂತರ ವಾಟರ್ ಮನ್ ಗಳನ್ನು ನೇಮಿಸುವುದೇ?

ಶ್ರೀ ಕೆ. ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಹೌದು